# ನಗುವ ಕುಂಕುಮವೂ ಕೂಸು ಪ್ರೀತಿಯೂ

ಒಂದಲ್ಲ, ನೂರೈವತ್ತು ಪ್ರತಿಭೆಗಳನ್ನು ಆಡಿಷನ್ ಮಾಡಿದ್ದ ಅವರ ಮುಖದಲ್ಲಿ ಸಣ್ಣ ಬೆವರ ಹನಿಯೂ ಇರಲಿಲ್ಲ. ಆದರೂ ಪಕ್ಕದಲ್ಲಿ ಇಟ್ಟಿದ್ದ ಮೃದು ವಸ್ತ್ರದಿಂದ ತಮ್ಮ ಮುಖವನ್ನು ಪದೇ ಪದೇ ಒರೆಸಿಕೊಳ್ಳುತ್ತಿದ್ದರು. ಕುಂಕುಮ ಮಾತ್ರ ಅಳಿಸಕೂಡದು ಎಂಬ ಎಚ್ಚರಿಕೆ.

ದೇವರಲ್ಲಿ ಅವರಿಗೆ ನಂಬಿಕೆ. ಅದಕ್ಕೇ ಪ್ರಸಾದದ ಕುಂಕುಮ ಹಣೆಗೆ ಹಚ್ಚುವುದು ಅಭ್ಯಾಸ. ಅದು ಇಡೀ ದಿನ ನಗುತ್ತಾ ಇರುವಂತೆ ನೋಡಿಕೊಳ್ಳುವುದು ಬೇಸಿಗೆಯಲ್ಲಂತೂ ಸವಾಲೇ ಸರಿ. ಚಿತ್ರೀಕರಣಕ್ಕೆಂದು ಹೋದರೆ, ಅದು ಅಳಿಸಿಹೋಗಿರುವ ಸಂದರ್ಭಗಳೂ ಇವೆ. ಆಗೆಲ್ಲಾ ಅವರು ಇಷ್ಟದೇವರನ್ನು ಮನ್ನಿಸೆಂದು ಪ್ರಾರ್ಥಿಸಿ ಕೆಲಸ ಮುಂದುವರಿಸದೇ ವಿಧಿ ಇರಲಿಲ್ಲ.

ನೂರೈವತ್ತು ಯುವಕರ ಆಡಿಷನ್ ನಡೆಸಿದ ನಂತರವೂ ಅವರು ತಮ್ಮ ಮಗನನ್ನೇ ಆಯ್ಕೆ ಮಾಡಿದ್ದರು. ಆ ಎಲ್ಲರಲ್ಲಿ ತಮ್ಮ ಕೂಸೇ ಬೆಸ್ಟು ಎಂದು ಸ್ಪಷ್ಟಪಡಿಸಿಕೊಳ್ಳಲು ಆ ಆಡಿಷನ್ ನೆರವಾಯಿತಂತೆ! ಚಿಕ್ಕಪ್ರಾಯದ ಕೂಸು ಜಿಮ್ಮು, ಗಿಮ್ಮು ಎಂದು ತಲೆಕೆಡಿಸಿಕೊಂಡಿತ್ತು. ನೃತ್ಯ ಲಾಲಿತ್ಯ ಕಲಿಯಲು ತರಗತಿಗೂ ಹೋಗಿತ್ತು. ಆದರೆ, ಅಭಿನಯ ಹೇಳಿಕೊಡಲು ಅಪ್ಪನೇ ಗುರು. ಕಲೆಗಳ ಸಾಮ್ರಾಟನೇ ಗುರು ಆದಮೇಲೆ ಕೂಸಿಗೆ ಅದೃಷ್ಟ ಖುಲಾಯಿಸಿದಂತೆಯೇ ಎಂದು ಭಾವಿಸಿದ್ದವರೂ ಇದ್ದರು. ನಿರ್ದೇಶನ, ನಟನೆ, ದೊಡ್ಡವರ ಸಂಗ, ರಾಜಕಾರಣಿಗಳ ಆಪ್ತವಲಯ ಎಲ್ಲ ಇದ್ದುದರಿಂದ ಅಪ್ಪನಿಗೆ ರಿಸ್ಕು ತೆಗೆದುಕೊಳ್ಳುವಷ್ಟು ಆರ್ಥಿಕ ಚೈತನ್ಯ ಇತ್ತು. ಕೂಸಿಗೆ ದಾರಿ ತೋರಿಸುವುದನ್ನು ತಂದೆ ಎಲ್ಲಾದರೂ ರಿಸ್ಕು ಎಂದು ಭಾವಿಸಲಾದೀತೆ...

ಗಿನ್ನೆಸ್ ದಾಖಲೆಗೆಂದೇ ಚಿತ್ರವೊಂದನ್ನು ಒಂದೇ ಶಾಟ್‌ನಲ್ಲಿ ತೆಗೆದು, ಆಪ್ತೇಷ್ಟರ ಮೆಚ್ಚುಗೆ ಪಡೆದವರು. ಆ ಚಿತ್ರವನ್ನು ಪ್ರಶಸ್ತಿ ಸಮಿತಿ ಸದಸ್ಯರು ಕಂಡು ಗಾಬರಿಗೊಂಡು, 'ಏನ್ರೀ ಇಷ್ಟು ಬಾಲಿಶವಾಗಿದೆ. ಹೊಸ ನಿರ್ದೇಶಕರದ್ದಾ' ಎಂದು ಕೇಳಿಬಿಡಬೇಕೆ. ತನಗಲ್ಲದಿದ್ದರೂ ತನ್ನ ಅನುಭವಕ್ಕೆ ಇಂಥ ಅವಮಾನ ಆಗಕೂಡದು ಎಂದು ಆ ನಿರ್ದೇಶಕರು ಸಂಕಟ ತೋಡಿಕೊಂಡಿದ್ದರು.

ಪರಭಾಷೆಗಳಲ್ಲಿ ಯಾವುದಾದರೂ ಚಿತ್ರ ಗೆದ್ದರೆ, ಥಟ್ಟನೆ ಅದರ ಹಕ್ಕು ಪಡೆಯುವುದು ಹೇಗೆ ಎಂಬ ದಾರಿ ಅವರಿಗೆ ಗೊತ್ತು. ಹಕ್ಕು ಪಡೆದ ಮೇಲೆ ಚಾಲ್ತಿಯಲ್ಲಿರುವ ಒಬ್ಬ ನಟನ ಕಾಲ್‌ಶೀಟ್ ಗಿಟ್ಟಿಸಿ, ಲಗುಬಗೆಯಲ್ಲಿ ಚಿತ್ರೀಕರಣ ಮುಗಿಸಬಲ್ಲ ಅನುಭವಿ. ಒಂದು ಕಾಲದಲ್ಲಿ ಮುಹೂರ್ತದ ದಿನವೇ ಚಿತ್ರದ ಬಿಡುಗಡೆಯ ದಿನಾಂಕವನ್ನೂ ಘೋಷಿಸುತ್ತಿದ್ದ ಶಿಸ್ತುಬದ್ಧ ವ್ಯಕ್ತಿತ್ವ. ಹಲವು ವರ್ಷ ಆ ವೃತ್ತಿಪರತೆಯನ್ನು ಅವರು ಉಳಿಸಿಕೊಂಡು ಬಂದಿದ್ದರು. ಈಗ ಚಿತ್ರಮಂದಿರ ಯಾವಾಗ ಸಿಗುತ್ತದೆ ಎಂದು ಹೇಳುವುದು ಮೊದಲಿನಷ್ಟು ಸುಲಭವಲ್ಲ. ಅದಕ್ಕೇ ಮುಹೂರ್ತದ ದಿನ ಬಿಡುಗಡೆ ಯಾವಾಗ ಎಂದು ಹೇಳಲಾಗದ ಸ್ಥಿತಿಗೆ ತಲುಪಿದ್ದಾರೆ. ಈಗಲೂ ಅವರು ದೇವರ ಪ್ರಸಾದದ ಕುಂಕುಮ ಹಚ್ಚುತ್ತಾರೆ. ಅವರ ಕೂಸು ಅಭ್ಯಾಸ ಮುಂದುವರಿಸಿದೆ. ಅದಕ್ಕೆ ಅಭಿನಯ ಕಲೆ ಮಾತ್ರ ಸಿದ್ಧಿಸುತ್ತಿಲ್ಲ ಎಂಬ ಟೀಕೆ ಕೆಲವರದ್ದು.

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68